ಈ ಮಾಮಂತಾವು ಎರಡು ಟಿಕೆಟ್‌ಗೆ ದುಡ್ಡು ವಸೂಲಿ ಮಾಡ್ತೀನಿ".

ಅಬ್ಬಾ! ಜನ ತುಂಬ್ಕೊಂಡ್ರು ಇಲ್ಲಿ. ನನ್ನ ಪಕ್ಕ ಕೂತವರು ಏನೋ ಅವಸರದಲ್ಲಿದ್ದಂತೆ ಕಾಣುತ್ತಿತ್ತು. ತುಂಬಾ ತಡವಾಗಿದೆ ಅನ್ನೋತರ ಕಂಡಕ್ಟರ್ ಜೊತೆ ಜೋರಾಗಿ ಮಾತಾಡ್ತಾ ಇದ್ರು. ಇದ್ದಕ್ಕಿದ್ದಂತೆ ಯಾರನ್ನೋ ಜೋರಾಗಿ, ''ಮಂಜು, ಕೂತ್ಕೊಂಡೆಯಾ?'' ಅಂತ ಕೇಳಿ ಅನಂತರ ಉತ್ತರವನ್ನು ಅವರೇ ಹೇಳಿದರು, ''ಸದ್ಯ ಕೂತ್ಕೊಂಡೆ ತಾನೇ, ಸರಿ''.

ಕಂಡಕ್ಟರ್ ಉತ್ತರಿಸಿದ, "ಹಾಂ ದಾದಾ, ಕೂರಿಸಿದಿನಿ."

ಅವರು ಸ್ವಲ್ಪ ಸಿಡಿಮಿಡಿಗೊಂಡಂತೆ ಕಾಣಿಸಿತು. ''ಕೂರಿಸೋಕೆ ನೀನ್ಯಾರು? ಸೀಟ್ ಖಾಲಿಯಿದ್ರೆ ಅವಳೇ ಕೂತ್ಕೋತಾಳೆ."

ಆಮೇಲೆ ಧ್ವನಿ ಬದಲಾಯಿಸಿ ನನ್ನ ಕಡೆ ತಿರುಗಿ ಅಂದರು, "ನೋಡಿದ್ರಾ ಇವರ ಕಾರುಬಾರು? ಹುಷಾರಿಲ್ಲದ ಹೆಣ್ಣುಮಗುವನ್ನು ಸ್ವಲ್ಪ ಕೂರಿಸಿ ಅಂದ್ರೆ ಎಷ್ಟು ಮಾತಾಡ್ತಾರೆ?''

ನಾನು ನಸು ನಕ್ಕೆ.

ಆಮೇಲೆ ನನ್ನನ್ನ ಕೇಳಿದರು, "ಹೌರಾ ತಲುಪೋಕೆ ಇನ್ನು ಎಷ್ಟು ಹೊತ್ತು ಬೇಕಾಗುತ್ತೆ?"

ನಾನು ರಸ್ತೆಯತ್ತ ಕೈ ತೋರಿಸಿ, ''ನೋಡಿ ಎಷ್ಟು ಜಾಮ್ ಇದೆ. ಎಷ್ಟೊತ್ತಾಗುತ್ತೆ ಅಂತ ಹೇಗೆ ಹೇಳೋದು?" ಅಂದೆ.

ನಾನು ಕೇಳದಿದ್ದರೂ ಅವರು ತಮಗೆ ತಾವೇ ಎಂಬಂತೆ ಮಾತಾಡಿಕೊಳ್ಳತೊಡಗಿದರು, ''ನಿಮಗೊತ್ತಾ ದೀದಿ? ಬೆಳಬೆಳಗ್ಗೇನೆ ಎದ್ದು ಮಗಳನ್ನು ಕರ್ಕೊಂಡು ಹೊರಟಿದಿನಿ. ಮಧ್ಯಾಹ್ನದ ರೈಲು ಹಿಡಿದೇಹೋದ್ರೆ ಮಗೂಗೆ ಕಷ್ಟ ಆಗುತ್ತೆ''.

ತುಂಬಿದ ಬಸ್ಸಾಗಿದ್ರೂ ಯಾವ ಸೀಟಲ್ಲೂ ನಾನು ಚಿಕ್ಕ ಹುಡುಗಿಯನ್ನ ನೋಡಲಿಲ್ಲ.

ಸೌಜನ್ಯಕ್ಕಾಗಿ ಹೇಳಿದೆ, "ಹಾಗಾದ್ರೆ ನೀವು ಇಳಿದು ರೈಲು ಟಿಕೆಟ್ ತಗೊಳೊಕೊ ಸಮಯ ಹಿಡಿಯುತ್ತೆ''.

"ಇಲ್ಲ, ಇಲ್ಲ! ನಾನು ದಿನಾ ಬರಬೇಕಿರೋದ್ರಿಂದ ತಿಂಗಳ ಪಾಸ್ ತಗೊಂಡಿದಿನಿ."

ಸ್ವಲ್ಪ ಹೊತ್ತು ಸುಮ್ಮನಿದ್ದು, ಅನಂತರ ಅವರು ನನ್ನನ್ನು ಕೇಳಿದರು, "ನಾನು ದಿನಾ ಯಾಕೆ ಬರ್ತೀನಿ ಅಂತ ಕೇಳಲಿಲ್ಲ ನೀವು?''

"ಯಾಕೆ? ಏನಾದ್ರೂ ಕೆಲಸವಿದೆಯಾ?"

"ಹಾಂ, ಇದೆ. ಮಗಳಿಗೆ ಪಿ.ಜಿ. ಹಾಸ್ಪಿಟಲ್‌ನಲ್ಲಿ ಚೆಕಪ್ ಮಾಡಿಸೋಕೆ. ರೇಡಿಯೇಷನ್ ಕೊಡಿಸೋಕೆ ದಿನಾ ಕರ್ಕೊಂಡು ಬರ್ಬೇಕು. ಮೊದ ಮೊದಲು ಈ ಡಾಕ್ಟ್ರಗಳು ಕಂಡುಹಿಡಿಲೇ ಇಲ್ಲ. ಆಮೇಲೆ ಅದೂ ಇದೂ ಅಂತ ಟೆಸ್ಟ್ ಪಸ್ಟ್ ಮಾಡಿ ಕೊನೆಗೂ ಹೇಳಿದ್ರು, ಇದು ಮ್ಯಾಲೆಗ್ನಂಟ್ ಟೈಪ್ ಕರ್ಸಿನೋಮ ಅಂತ! ಬೇರೆಯವರಾಗಿದ್ರೆ ಇದನ್ನ ತಡಕೊಳ್ತಾ ಇರಲಿಲ್ಲ. ನಾನು ಗಟ್ಟಿಕುಳ. ಸ್ವಂತ ಮಗಳಾಗಿದ್ರೂ ತಲೆ ಕೆಡಿಸಿಕೊಳ್ಳದೆ ನಿಭಾಯಿಸ್ತಾ ಇದೀನಿ. ಡಾಕ್ಟರ್ ಹೇಳ್ತಾರೆ, ಆಪರೇಷನ್ ಮಾಡಿ ಪ್ರಯೋಜನವಿಲ್ಲ ಅಂತ. ಬರೀ ರೇಡಿಯೇಷನ್‌ನಲ್ಲಿ ಒಂದು ವರ್ಷ ಇರಬಹುದಂತೆ. ಒಂದು ವರ್ಷದಿಂದ ಇದು ನಡೀತಾ ಇದೆ."

ನನಗೆ ಬಹಳ ಬೇಜಾರಾಯಿತು. ಕೇಳಿದೆ, ''ಮಗಳಿಗೆ ಎಷ್ಟು ವರ್ಷ?''

"ಅದೇ ಈಗಷ್ಟೇ ಹದಿನೇಳಕ್ಕೆ ಬಿದ್ದಿದೆ. ಎಷ್ಟು ಚೂಟಿಯಾಗಿದ್ದ ಹುಡುಗಿ. ಎಷ್ಟು ಕಷ್ಟಪಡ್ತಾ ಇದೆ.'' ಕಣ್ಣಲ್ಲಿ ನೀರು, ಮುಖದಲ್ಲಿ ನಗು ತುಂಬಿಕೊಂಡು, ''ನಾನು ಬಿಟ್ಟುಬಿಡೋಕೆ ತಯಾರಿಲ್ಲ. ಯಮನ ಜೊತೆ ಹೋರಾಟ ಮಾಡ್ತಾ ಇದಿನಿ". ನನಗನ್ನಿಸಿತು, ಈಗವರು ತಮಗೆ ತಾವೇ ಮಾತಾಡಿಕೊಳ್ತಾ ಇದ್ದಾರೆ ಅಂತ.